<u>ಸಾಕ್ಷಿಯನ್ನು ದಿನಾಂಕ **24-01-2025** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ ಶ್ರೀ ಎಂ ಜೆ ವಕೀಲರಿಂದ ಅರ್ಜಿದಾರ ಪರವಾಗಿ</u> ಃ(ಸಾಕ್ಷಿಯು ಸಾಕ್ಷಿಯ ಕಟಕಟೆಯಲ್ಲಿ ಹಾಜರಾಗಿ ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿ ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಎಂದು ಸತ್ಯಾಪನೆ ಮಾಡಿರುತ್ತಾರೆ)

ಅಂತರ ಪ್ರಮಾಣ ಪತ್ರವನ್ನು ನಿಪಿ-1 ಎಂದು, ನನ್ನ ಹೆಂಡತಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ನಿಪಿ-2 ಎಂದು, ಪುರಸಭೆ ಕಾರಟಗಿಯವರ ಹಿಂಬರಹವನ್ನು ನಿಪಿ-3 ಎಂದು, ಕಬ್ಜೆಯ ಬಗ್ಗೆ ಹಿಂಬರಹದ ಪ್ರತಿಯನ್ನು ನಿಪಿ-4 ಎಂದು, ಗೆಜೆಟ್ ನೊಟಿಫಿಕೇಷನ್ ಪ್ರತಿಯನ್ನು ನಿಪಿ-5 ಎಂದು, ಪ್ರಸ್ತಾವಿತ ಪುರಸಭೆ ಗಡಿಯ ವಿವರದ ಪ್ರತಿಯನ್ನು ನಿಪಿ-6 ಎಂದು, ಬೇರೆ ಜಮೀನುಗಳು ಹಾಗೂ ಪಕ್ಕದ ಜಮೀನುಗಳಿಗೆ ಸಂಬಂಧಪಟ್ಟ ಇದೇ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯ, ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯಗಳು ಮಾಡಿದ ತೀರ್ಪುಗಳ ದೃಢೀಕೃತ ಪ್ರತಿಗಳನ್ನು ನಿಪಿ-7 ರಿಂದ ನಿಪಿ-75 ಎಂದು, ನಮ್ಮ ಪಕ್ಕದ ಜಮೀನುಗಳು ಎನ್ ಎ ಆದ ಬಗ್ಗೆ ಆರ್ ಓ ಆರ್ ಗಳು, ಆದೇಶದ ಪ್ರತಿಗಳು, ಇತರೆ ದಾಖಲಾತಿಗಳನ್ನು ನಿಪಿ-76 ರಿಂದ ನಿಪಿ-87 ಎಂದು, ರಘುನಾಥ ತುಕ್ಕಾ ಇವರ ವರದಿ, ಸ್ಕೆಚ್ಚು, ಕೀ ಪ್ಲ್ಯಾನ್ ಪ್ರತಿಯನ್ನು ನಿಪಿ-88 ರಿಂದ ನಿಪಿ-90 ಎಂದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರತಿಯನ್ನು ನಿಪಿ-91 ಎಂದು, ಪ್ರೊಟೆಸ್ಟ್ ಅರ್ಜಿಯ ಮೂಲ ಪ್ರತಿಯನ್ನು ನಿಪಿ-92 ಎಂದು, 12 (2) ನೊಟೀಸಿನ ಪ್ರತಿಯನ್ನು ನಿಪಿ-93 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು, ಗಂಗಾವತಿ.